# ಯೂಟ್ಯೂಬ್ ಕ್ರಿಯೇಟ್

## ವಿಡಿಯೊ ಎಡಿಟಿಂಗ್‌ಗೆ ಹೊಸ ಹಾದಿ




**ವಿಡಿಯೊಗಳ ಭಂಡಾರವಾಗಿರುವ ಯೂಟ್ಯೂಬ್‌ಗೆ 'ಮೊಬೈಲ್ ಕ್ರಿಯೇಟರ್ಸ್'ಗಳ ಕೊಡುಗೆ ಅಗಾಧ. ಹೀಗಾಗಿ, ಇವರಿಗೆ ಅನುಕೂಲವಾಗಲೆಂದು ಯೂಟ್ಯೂಬ್ ಹೊಸ 'ಎಡಿಟಿಂಗ್ ಆ್ಯಪ್' ಪರಿಚಯಿಸಿದೆ.**

**■ ಶಶಿಕುಮಾರ್ ಸಿ.**

ವಿಡಿಯೊ ಸ್ಟ್ರೀಮಿಂಗ್ ಆ್ಯಪ್ ಮಾತ್ರವಲ್ಲದೆ, ಹಣ ಗಳಿಕೆಯ ತಾಣವಾಗಿಯೂ ಯೂಟ್ಯೂಬ್ ಗುರ್ತಿಸಿಕೊಂಡಿದೆ. ಹೀಗಾಗಿ, ಕೋಟ್ಯಂತರ ಮಂದಿ ಯೂಟ್ಯೂಬ್ ಕಿಂದರಜೋಗಿಯ ಹಿಂದೆ ಬಿದ್ದಿದ್ದಾರೆ. ಯೂಟ್ಯೂಬ್‌ಗೆ ಜೋತು ಬಿದ್ದವರ ಪೈಕಿ ಬಹುತೇಕರಿಗೆ ತಾವು ಅಪ್‌ಲೋಡ್ ಮಾಡುವ ವಿಡಿಯೊಗಳನ್ನು 'ಎಡಿಟಿಂಗ್' ಮಾಡುವುದೇ ದೊಡ್ಡ ಸಮಸ್ಯೆ. ಇಂಥವರ ಅನುಕೂಲಕ್ಕೆಂದೇ ಯೂಟ್ಯೂಬ್ ಹೊಸ ಎಡಿಟಿಂಗ್ ಆ್ಯಪ್ ರೂಪಿಸಿದೆ. ಅದುವೇ 'ಯೂಟ್ಯೂಬ್ ಕ್ರಿಯೇಟ್'.

ಎಡಿಟಿಂಗ್ ವಿಚಾರದಲ್ಲಿ ಹಿಂದೆ ಬಿದ್ದಿರುವ ಯೂಟ್ಯೂಬರ್‌ಗಳಿಗೆ 'ಯೂಟ್ಯೂಬ್ ಕ್ರಿಯೇಟ್'ನಿಂದ ಅನುಕೂಲವಾಗಲಿದ್ದು, ಇದರಿಂದ ಎಡಿಟಿಂಗ್ ಜೊತೆಗೆ ವಿಡಿಯೊ ಕ್ರಿಯೇಟ್ ಮಾಡಿ, ಅದನ್ನು ಇತರರೊಂದಿಗೆ ಹಂಚಿಕೊಳ್ಳಬಹುದಾಗಿದೆ. ಹೊಸ ಆ್ಯಪ್ ಬಗ್ಗೆ ಯೂಟ್ಯೂಬ್ ಈಚೆಗೆ ನಡೆದ 'ಮೇಡ್ ಆನ್ ಯೂಟ್ಯೂಬ್ ಇವೆಂಟ್'ನಲ್ಲಿ ಘೋಷಣೆ ಮಾಡಿದೆ. ಪ್ರಾಯೋಗಿಕ ಹಂತದಲ್ಲಿರುವ ಈ ಆ್ಯಪ್, ತ್ವರಿತವಾಗಿ ಎಲ್ಲರಿಗೂ ಲಭ್ಯವಾಗಲಿದೆ.

ಆ್ಯಂಡ್ರಾಯ್ಡ್‌ನ ಬೀಟಾ ವರ್ಷನ್‌ನ ಪರೀಕ್ಷೆ ಪೂರ್ಣಗೊಂಡ ನಂತರ ಈ ಆ್ಯಪ್, ಭಾರತ, ಅಮೆರಿಕ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಇಂಡೊನೇಷ್ಯಾ, ಕೊರಿಯಾ, ಸಿಂಗಪುರಗಳಲ್ಲಿ ಬಳಕೆಗೆ ಲಭ್ಯವಾಗಲಿದೆ. 2024ರಲ್ಲಿ 'ಐಒಎಸ್'ಗೂ ಈ ಅಪ್‌ಡೇಟ್ ಸಿಗಲಿದೆ.

'ವಿಡಿಯೊಗಳ ಉತ್ಪಾದನಾ ಪ್ರಕ್ರಿಯೆ ಕಷ್ಟಕರ ಎಂಬುದು ನಮಗೆ ಗೊತ್ತಿದೆ. ಮೊದಲ ಬಾರಿಗೆ ವಿಡಿಯೊ ಮಾಡುವವರು ಅಪ್‌ಲೋಡ್ ಮಾಡಲು ಸಾಕಷ್ಟು ಪರದಾಡುತ್ತಾರೆ. ಇದರಲ್ಲಿ ಎಡಿಟಿಂಗ್‌ನ ವಿಷಯವೇ ಹೆಚ್ಚಿನ ತಲೆಬಿಸಿ. ಹೀಗಾಗಿ ನಮ್ಮ 'ಮೊಬೈಲ್ ಕ್ರಿಯೇಟರ್ಸ್'ಗೆ (ಯೂಟ್ಯೂಬರ್ಸ್ ಅಂತಲೂ ಕರೆಯಲಾಗುತ್ತದೆ) ಅನುಕೂಲವಾಗಲೆಂದು ಈ ಆ್ಯಪ್ ಬಿಡುಗಡೆ ಮಾಡುತ್ತಿದ್ದೇವೆ' ಎಂದು ಯೂಟ್ಯೂಬ್ ಹೇಳಿದೆ.

'ಯೂಟ್ಯೂಬ್ ಕ್ರಿಯೇಟ್' ಎನ್ನುವುದು ಕಿರುಚಿತ್ರಗಳು ಮತ್ತು ದೀರ್ಘವಾದ ವಿಡಿಯೊಗಳೆರಡಕ್ಕೂ ಎಡಿಟಿಂಗ್ ಅನ್ನು ಸರಳ ಮತ್ತು ಸುಲಭಗೊಳಿಸಲು ವಿನ್ಯಾಸಗೊಳಿಸಿದ ಉಚಿತ ಅಪ್ಲಿಕೇಷನ್ ಆಗಿದೆ ಎಂದಿರುವ ಕಂಪನಿಯು, ಈ ಆ್ಯಪ್ ಸಹಾಯದಿಂದ ವಿಡಿಯೊ ಕ್ರಿಯೇಟರ್ಸ್‌ಗೆ ತಮ್ಮ ಆಸಕ್ತಿಯನ್ನು ಇನ್ನಷ್ಟು ಸೃಜನಾತ್ಮಕವಾಗಿಸಲು ಸಾಧ್ಯವಾಗಲಿದೆ ಎಂದಿದೆ.

### ಆ್ಯಪ್ ಒಳಗೊಂಡ ಫೀಚರ್‌ಗಳ ಕಾರ್ಯ

**ಆಡಿಯೊ ಕ್ಲೀನಪ್:** ವಿಡಿಯೊದಲ್ಲಿನ ಅನವಶ್ಯಕ ಹಿನ್ನೆಲೆ ಧ್ವನಿ ತೆಗೆಯುತ್ತದೆ. ಇದರಿಂದ ಧ್ವನಿ ಇನ್ನಷ್ಟು ನಿಖರವಾಗಿ ವೀಕ್ಷಕರಿಗೆ ಕೇಳುತ್ತದೆ.

**ಆಟೊ ಕ್ಯಾಪ್ಷನ್:** ವಿಡಿಯೊಗೆ ಸಂಬಂಧಿಸಿದಂತೆ ಇಂಗ್ಲಿಷ್, ಹಿಂದಿ ಸೇರಿದಂತೆ ಇನ್ನಿತರ ಭಾಷೆಗಳಲ್ಲಿ ಅಡಿ ಟಿಪ್ಪಣಿ ನೀಡುವ ಕಾರ್ಯವನ್ನು ಈ ಫೀಚರ್ ತಾನಾಗಿಯೇ ಮಾಡುತ್ತದೆ.

**ಫಿಲ್ಟರ್/ ಎಫೆಕ್ಟ್/ ಟ್ರಾನ್ಸಿಷನ್ಸ್:** ಫಿಲ್ಟರ್ ಮಾಡಿ, ಚೊಕ್ಕವಾಗಿಸಿ, ಅಗತ್ಯಕ್ಕೆ ತಕ್ಕಂತೆ ಎಫೆಕ್ಟ್ ನೀಡಿ ವಿಡಿಯೊವನ್ನು ಇನ್ನಷ್ಟು ಆಕರ್ಷಕವಾಗಿಸುತ್ತದೆ ಈ ಆಯ್ಕೆ.

**ರಾಯಲ್ಟಿ ಫ್ರೀ ಮ್ಯೂಸಿಕ್:** ಉಚಿತವಾಗಿ ಲಭ್ಯವಿರುವ ಸಾವಿರಾರು ಮ್ಯೂಸಿಕ್, ಸೌಂಡ್ ಎಫೆಕ್ಟ್ ಅನ್ನು ವಿಡಿಯೊಗೆ ಇದು ಒದಗಿಸುತ್ತದೆ. ಈ ಮ್ಯೂಸಿಕ್ ಟ್ರ್ಯಾಕ್‌ಗಳು ಹಾಗೂ ಸೌಂಡ್ ಎಫೆಕ್ಟ್ ಕಾಪಿ ರೈಟ್ ಸಮಸ್ಯೆಯಿಂದ ಮುಕ್ತಗೊಂಡಿರುತ್ತವೆ.

**ಪಬ್ಲಿಷ್ ಡೈರೆಕ್ಟ್ ಟು ಯೂಟ್ಯೂಬ್:** ಮೇಲ್ಕಂಡ ವಿಧಾನಗಳ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ವಿಡಿಯೊ ಯೂಟ್ಯೂಬ್‌ಗೆ ಅಪ್‌ಲೋಡ್ ಆಗಲು ಸಿದ್ಧಗೊಳ್ಳುತ್ತದೆ. ತಾನಾಗಿಯೇ ಯೂಟ್ಯೂಬ್‌ನ ಶಾರ್ಟ್ ಹಾಗೂ ಲಾಂಗರ್ ವಿಡಿಯೊ ವಿಭಾಗಕ್ಕೆ ಅಪ್‌ಲೋಡ್ ಆಗುವಂತೆ ಸಿದ್ಧಗೊಳ್ಳುತ್ತದೆ ಅಂತಿಮವಾಗಿ ವಿಡಿಯೊ ಪರಿಶೀಲಿಸಿ ಅಪ್‌ಲೋಡ್ ಬಟನ್ ಒತ್ತಬೇಕಾಗುತ್ತದೆ. ■

### ಎಡಿಟಿಂಗ್ ಯಾಕೆ ಮುಖ್ಯ?

ವಿಡಿಯೊಗಳನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಿದಾಕ್ಷಣ ಹಣ ಸಿಗುತ್ತದೆ ಎಂದಲ್ಲ. ವಿಡಿಯೊಗಳನ್ನು ಎಷ್ಟು ಮಂದಿ ನೋಡಿದ್ದಾರೆ ಅನ್ನುವುದರ ಆಧಾರದ ಮೇಲೆ ಹಣ ಸಿಗುತ್ತದೆ. ಹೆಚ್ಚು ಹೆಚ್ಚು ವೀಕ್ಷಣೆ (ವ್ಯೂವ್ಸ್) ಸಿಗುವಲ್ಲಿ ವಿಡಿಯೊಗಳ ಎಡಿಟಿಂಗ್ ಬಹುಮುಖ್ಯ ಪಾತ್ರವಹಿಸುತ್ತದೆ. ಚೊಕ್ಕವಾಗಿ, ಆಕರ್ಷಕವಾಗಿ ಎಡಿಟಿಂಗ್ ಮಾಡಿದ, ಒಳ್ಳೆಯ ಕಂಟೆಂಟ್‌ವುಳ್ಳ ವಿಡಿಯೊಗಳು ಹೆಚ್ಚು ಹೆಚ್ಚು ವೀಕ್ಷಣೆ ಪಡೆಯುತ್ತವೆ. ಹೀಗಾಗಿ ಎಡಿಟಿಂಗ್‌ಗೆ ಹೆಚ್ಚಿನ ಆದ್ಯತೆ ಇದೆ.

### ಯಾರೀ ಮೊಬೈಲ್ ಕ್ರಿಯೇಟರ್ಸ್?

ವಿಡಿಯೊಗಳನ್ನು ಕ್ಯಾಮೆರಾಗಳ ಮೂಲಕವೇ ಚಿತ್ರೀಕರಿಸಿ ಅವುಗಳನ್ನು ಕಂಪ್ಯೂಟರ್‌ಗಳ ಮೂಲಕ ಎಡಿಟಿಂಗ್ ಮಾಡುವವರು ಕಡಿಮೆ. ಬದಲಿಗೆ ಮೊಬೈಲ್ ಮೂಲಕ ವಿಡಿಯೊ ಮಾಡಿ ಅವುಗಳನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುವವರ ಸಂಖ್ಯೆ ದೊಡ್ಡದಿದೆ. ಹೀಗಾಗಿಯೇ ಅವರನ್ನು 'ಮೊಬೈಲ್ ಕ್ರಿಯೇಟರ್ಸ್' ಎಂದು ಯೂಟ್ಯೂಬ್ ಕರೆಯುತ್ತದೆ. ಈ ಮೊಬೈಲ್ ಕ್ರಿಯೇಟರ್ಸ್‌ಗೆ ಅನುವಾಗಲೆಂದು ಹೊಸ ಆ್ಯಪ್ ಬಿಡುಗಡೆ ಮಾಡಲಾಗುತ್ತಿದೆ.

ಯೂಟ್ಯೂಬ್‌ಗೆ ವಿಡಿಯೊಗಳನ್ನು ಅಪ್‌ಲೋಡ್ ಮಾಡುವುದನ್ನೇ ವೃತ್ತಿಯಾಗಿಸಿಕೊಂಡು ಅದರಲ್ಲಿ ಸಕ್ರಿಯವಾಗಿರುವವರಿಗೆ ಯೂಟ್ಯೂಬರ್ಸ್ ಅಥವಾ ಕಂಟೆಂಟ್ ಕ್ರಿಯೇಟರ್ಸ್ ಎಂದು ಸಹಜವಾಗಿ ಕರೆಯಲಾಗುತ್ತದೆ. ಮೊಬೈಲ್ ಕ್ರಿಯೇಟರ್ಸ್ ಹಾಗೂ ಯೂಟ್ಯೂಬರ್ಸ್ ಕಾರ್ಯ ಒಂದೇ ಆಗಿರುವುದರಿಂದ ಇವರನ್ನು ಗುರುತಿಸುವ ವಿಧಾನದಲ್ಲೂ ಸಾಮ್ಯತೆ ಇದೆ.